# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ ಸಕಾಅ/ವಾ.ನಂ.39/ಪಿಆರ್/02/2022-23

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ, ದಾಸರಹಳ್ಳಿ ವಲಯ
ಹೆಚ್.ಎಂ.ಟಿ.ಬಡಾವಣೆ, ನಾಗಸಂದ್ರ ಪೋಸ್ಟ್
ಬೆಂಗಳೂರು, ದಿನಾಂಕ : 20-04-2022

## ವಾರ್ಡ್ -39ರ ವಾರ್ಡ್ ಸಭೆಯ ನಡವಳಿ

ದಿನಾಂಕ:-20-04-2022 ರಂದು ಪೀಣ್ಯ ಕೈಗಾರಿಕ ಪ್ರದೇಶ ಉಪ ವಿಭಾಗ ವಾರ್ಡ್ ನಂ.39 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಪುಟ್ಟಸ್ವಾಮಿ ಜೆ. ವಾರ್ಡ್-39 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದ್ದವರು:

1. ಶ್ರೀ ಪುಟ್ಟಸ್ವಾಮಿ ಜೆ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀಮತಿ.ಅರ್ಚನ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀ ಹೆಚ್.ರಮೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು
4. ಡಿ.ಆರ್.ಮಾಳಯ್ಯ, ನೀರು ಸರಬರಾಜು ಸಹಾಯಕರು ವಾ.ನಂ.39
5. ರಮೇಶ್.ಟಿ. ನೀರು ಸರಬರಾಜು ಸಹಾಯಕರು ವಾ.ನಂ.39
6. ಸಂದೀಪ್ ಜೆ.ಡಿ ಸಹಾಯಕ ಅಭಿಯಂತರರು, ಜಲಮಂಡಳಿ (ಬಿಡಬ್ಲ್ಯುಎಸ್ಎಸ್‌ಬಿ)
7. ಶ್ರೀ.ರಾಮಕೃಷ್ಣ ಕಂದಾಯ ಪರಿವೀಕ್ಷಕರು ವಾ.ನಂ.39

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು

- ಹಿಂದಿನ ಸಭೆಯ ನಡವಳಿಗಳು ಓದಿ ರೆಕಾರ್ಡ್ ಮಾಡಲಾಯಿತು ಅದರಂತೆ.ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ ವಾರ್ಡ್ ಸಂಖ್ಯೆ 39 ರಲ್ಲಿ ಗುತ್ತಿಗೆದಾರರಿಂದ ಸ್ವಚ್ಛತೆ ಕೆಲಸ ನಡೆಯುತ್ತಿದ್ದು ಜಿ.ಪಿ.ಎಸ್ ಮತ್ತು ಆರ್ ಎಫ್ ಐ ಡಿ ವಿಧಾನವನ್ನು ಆಟೋ ಟಿಪ್ಪರ್‌ಗಳಿಗೆ ಅಳವಡಿಸಲಾಗಿದ್ದು ಅದರಂತೆ ನಿರ್ವಹಿಸಲಾಗುತ್ತಿದೆ.
- ಪೌರಕಾರ್ಮಿಕರಿಗೆ **Street ID** ಯಂತೆ ರಸ್ತೆಯನ್ನು ನೀಡಲಾಗಿದ್ದು ಪ್ರತಿನಿತ್ಯ ಬೀದಿ ಕಸ ಗುಡಿಸುವುದನ್ನು ಪರಿಶೀಲಿಸಲುವುದು ಹಾಗೂ ಯಾವುದೇ ಘನತ್ಯಾಜ್ಯ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.
- ಬೀದಿ ದೀಪಗಳ ನಿರ್ವಹಣೆ ಬಗ್ಗೆ ಬೀದಿ ದೀಪ ನಿರ್ವಹಣೆಯವರು ಮಾತನಾಡುತ್ತಾ ತುರ್ತಾಗಿ ರಿಪೇರಿ ಮಾಡುತ್ತಿರುವುದಾಗಿ ತಿಳಿಸಲಾಯಿತು. ಅಧ್ಯಕ್ಷರು ಮಾತನಾಡುತ್ತಾ ಬೀದಿದೀಪವನ್ನು ರಾತ್ರಿ ವೇಳೆ ಪರಿಶೀಲಿಸಿ ಬೆಳಿಗ್ಗೆ ತುರ್ತಾಗಿ ಸರಿಪಡಿಸುವಂತೆ ತಿಳಿಸಲಾಯಿತು.

- ಉದ್ಯಾನವನಗಳು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ವಾಕಿಂಗ್ ಮಾಡಲು ಶುಚಿತ್ವ ಕಾಪಾಡುವಂತೆ ಹಾಗೂ ಉತ್ತಮ ನಿರ್ವಹಣೆ ಮಾಡಲು ಸೂಚಿಸಲಾಯಿತು.
- ವಾರ್ಡನಲ್ಲಿ ಗುಂಡಿ ಮುಚ್ಚುವ ಕೆಲಸ ಹೆಚ್.ಎಂ.ಟಿ ಬಡಾವಣೆ ಮತ್ತು ವಿಕಾಸನಗರ ಮತ್ತು ವಿನಾಯಕ ನಗರ ಗಳಲ್ಲಿ ಗುಂಡಿಮುಚ್ಚುವಂತೆ ತಿಳಿಸಲಾಯಿತು.

ನಾಗಸಂದ್ರದಲ್ಲಿ ಕಾಂಕ್ರೀಟ್ ಅಡ್ಡರಸ್ತೆಗಳಲ್ಲಿ ಕಾಮಗಾರಿ ನಿರ್ವಹಿಸಲಾಯಿತು ಹಾಗೂ ಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ .

- ಮಾರುತಿ ಬಡಾವಣೆಯ 1ನೇ,3ನೇ,4ನೇ,5ನೇ& 6ನೇ ಅಡ್ಡ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಯಿತು.
- ಚೊಕ್ಕಸಂದ್ರ ಮುಖ್ಯರಸ್ತೆ ಹಾಗೂ 1ನೇ, 2ನೇ & 3ನೇ, 15ನೇ ಅಡ್ಡ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಯಿತು.
- ಅಮರಾವತಿ ಬಡಾವಣೆ ಮುಖ್ಯ ರಸ್ತೆಯಲ್ಲಿ ಡಾಂಬರೀಕರಣ ಮಾಡಲಾಯಿತು.
- ಬೆಲಮ್ಮಾರ್ ಲೇಔಟ್‌ನಲ್ಲಿ 1 ನೇ, 3ನೇ,4ನೇ,5ನೇ ಅಡ್ಡರಸ್ತೆ ಮತ್ತು 1ನೇ ಮುಖ್ಯ ರಸ್ತೆಯಲ್ಲಿ ಡಾಂಬರೀಕರಣ ಮಾಡಲಾಯಿತು.
- ರುಕ್ಮಿಣಿನಗರದ 1ನೇ,2ನೇ,3ನೇ,4ನೇ,5ನೇ ಹಾಗೂ 6ನೇ ಮುಖ್ಯರಸ್ತೆಗಳ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದೆ.
- ನಾರಾಯಣ ಪುರ ಮುಖ್ಯ ರಸ್ತೆಯ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.
- ನಾಗಸಂದ್ರದ ಜೋಡಿಬಾವಿ ರಸ್ತೆಯ 1ನೇ,2ನೇ,3ನೇ ಮತ್ತು ಶೋಭಾ ಅಪಾರ್ಟಮೆಂಟ್ ಹತ್ತಿರದ ಮುಖ್ಯ ರಸ್ತೆಯ ಕಾಂಕ್ರೀಟೀಕರಣದ ಕಾರ್ಯ ಪ್ರಗತಿಯಲ್ಲಿದೆ.
- ನಾಗಸಂದ್ರದ ಮುಖ್ಯರಸ್ತೆಯ ಡಾಂಬರೀಕರಣದ ಕಾಮಗಾರಿಯು ಪ್ರಗತಿಯಲ್ಲಿದೆ.
- ರಸ್ತೆಗಳಿಗೆ ಗುಂಡಿ ಮುಚ್ಚುವ ಕಾಮಗಾರಿಗೆ ಅವಶ್ಯಕವಿರುವ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸಿದೆ.
- ಚರಂಡಿಗಳಲ್ಲಿನ ಹೂಳು ಎತ್ತುವ ಕಾಮಗಾರಿಯು ಪ್ರಗತಿಯಲ್ಲಿದ್ದು, ನೆಲಗದರನಹಳ್ಳಿಯ ಅಡ್ಡರಸ್ತೆಗಳಲ್ಲಿ ನಿರ್ವಹಿಸಲಾಗುತ್ತಿದೆ.
- ಬೆಲ್ಮಾರ್ ಲೇಔಟ್‌ನಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಮಾಡಲಾಗಿದೆ.
- ಅಮರವಾತಿ ಬಡಾವಣೆ ರಸ್ತೆ ಡಾಂಬರೀಕರಣ ಕಾಮಗಾರಿ ಮಾಡಲಾಗಿದೆ.
- ಚೊಕ್ಕಸಂದ್ರ 5ನೇ ಅಡ್ಡರಸ್ತೆಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಪೂರ್ಣಗೊಂಡಿದೆ.
- ಚೊಕ್ಕಸಂದ್ರ 6ನೇ ಅಡ್ಡರಸ್ತೆಯಲ್ಲಿ ಚರಂಡಿಯಲ್ಲಿ ಹೊಳೆತ್ತುವ ಕಾಮಗಾರಿ ಮಾಡಲಾಗಿದೆ..
- ಸಹಾಯ ಹ್ಯಾಪ್‌ನ ಕಂಪ್ಲೇಟ್‌ಗಳನ್ನು ಪೂರ್ಣಗೊಳಿಸಲಾಗುತ್ತಿದೆ.
- ಏಪ್ರಿಲ್‌ತಿಂಗಳಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಮಾಡಿದ ಕೇಸ್‌ಗಳ ನಂ.34 ದಾಖಲಿಸಲಾದ ದಂಡದ ಮೊತ್ತ. ರೂ. 5480/– ಎಂದು ಮಾರ್ಷಲ್ ಸಭೆಗೆ ಮಾಹಿತಿ ನೀಡಿದರು.
- ಮೇಲ್ಕಂಡ ಕಾಮಗಾರಿಗಳ ವಿವರವನ್ನು ಸಭೆಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು
- ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖಾ ವತಿಯಿಂದ ರಾಜಕಾಲುವೆ ಪಕ್ಕದಲ್ಲಿ ಸಬ್ ಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.
- ಮಳೆ ಬೀಳುತ್ತಿರುವ ಕಾರಣದಿಂದಾಗಿ ಚರಂಡಿಗಳಲ್ಲಿ ಬ್ಲಾಕ್ ಹಾಗಿ ಮಳೆ ನೀರು ಮನೆಗೆ ನುಗ್ಗುತ್ತಿರುವುದಾಗಿ ಸಾರ್ವಜನಿಕರು ದೂರು ನೀಡಿದ್ದು, ಸದರಿ ದೂರಿನ ಅನ್ವಯ ಬ್ಲಾಕ್ ಆದ ಜಾಗಗಳನ್ನು ಗುರುತಿಸಿ ಸಿಲ್ಟ್ ಎತ್ತಲಾಗುತ್ತಿದೆ.
-

ಸಭೆಗೆ ಹಾಜರಾಗಲು ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದರು ಸಹ ಗೈರು ಹಾಜರಾಗುತ್ತಿದ್ದು ಈ ಸಂಬಂಧ ಗೈರು ಹಾಜರಾದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ಕಾರ್ಯದರ್ಶಿಗೆ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

20/04/2022
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 39 ಚೊಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

20/04/2022
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ. 39 ಚೊಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಧಿಕಾರಿಗಳ ಮಾಹಿತಿಗಾಗಿ

1.ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2.ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3.ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4.ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5.ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೀ.ಕೈ.ಪ್ರ)ರವರ ಮಾಹಿತಿಗಾಗಿ ಕಳುಹಿಸಿದೆ
6.ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
7.ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
8.ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
9.ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
10.ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
11.ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್-5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ